ಓ.ಎಸ್ ನಂ. 14/2021 ಪಿ.ಡಬ್ಲೂಃ 1

ದಿನಾಂಕಃ 09.08.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು

ಪಾಟೀಸವಾಲು ಶ್ರೀ. ಡಿ.ಬಿ.ಡಿ. ವಕೀಲರಿಂದ

ನಾನು ಪದವಿ ವರೆಗೆ ಶಿಕ್ಷಣವನ್ನು ಪಡೆದಿರುತ್ತೇನೆ. ನಾನು ನೀರಾವರಿ ಇಲಾಖೆಯಲ್ಲಿ ಪ್ರ.ದ.ಸ ಆಗಿ ಕರ್ತವ್ಯ ನಿರ್ವಹಿಸಿ ಈಗ ನಿವೃತ್ತಿಯನ್ನು ಹೊಂದಿರುತ್ತೇನೆ. 18 ವರ್ಷಗಳ ಕಾಲ ನಾನು ಸೇವೆಯನ್ನು ಮಾಡಿರುತ್ತೇನೆ. ನಾನು ಶಿರಸಿ, ದೊಡ್ಡಕುಂಚೇವು ಹೇಮಾವತಿ ನೀರಾವರಿ ಇಲಾಖೆಯಲ್ಲಿ ಕೆಲಸ ಮಾಡಿರುತ್ತೇನೆ. ಶಿರಸಿಯಲ್ಲಿ ನಾನು 5 ವರ್ಷಗಳ ಕಾಲ ಕೆಲಸ ಮಾಡಿದ್ದೆ ನನ್ನ ಕುಟುಂಬ ಊರಿನಲ್ಲಿ ವಾಸವಿತ್ತು. ನನ್ನ ತಂದೆ ಆಗ ಬದುಕಿರಲಿಲ್ಲ. ನನ್ನ ತಂದೆಯು 1989 ರಲ್ಲಿ ಮೃತಪಟ್ಟಿರುತ್ತಾರೆ. ನಾನು ಈ ದಾವೆಯನ್ನು ಹಿಸ್ಸೆ ಬರಲು ದಾಖಲು ಮಾಡಿರುತ್ತೇನೆ. ವಾದಪತ್ರದಲ್ಲಿನ ಸಂಗತಿಗಳು ನನಗೆ ಗೊತ್ತಿರುತ್ತದೆ . ನನ್ನ ತಂದೆಯ ಹೆಸರು ತಿಮ್ಮಪ್ಪಯ್ಯ ಅವರ ತಂದೆಯ ಹೆಸರು ಬೋರಿಗೌಡ. ನಾನು ಹಾಗೂ 2 ನೇ ಪ್ರತಿವಾದಿ ಅಣ್ಣತಮ್ಮಂದಿರು. ನಾನು ಈಗ 5 ವರ್ಷದಿಂದ ಬೇರೆ ವಾಸ ಇದ್ದೇನೆ.

ನಾನು ಭಾಗ ಕೊಡಬೇಕೆಂದು ಕೇಳಿದಾಗ ಭಾಗ ಕೊಡದ ಕಾರಣ ನಾನು ಪ್ರತ್ಯೇಕವಾಗಿ ಅದೇ ಮನೆಯಲ್ಲಿ ವಾಸ ಇದ್ದೇನೆ. ನಾನು ವಾಸ ಇರುವ ಮನೆಯನ್ನು ನಾನು ಹಾಗೂ 2 ನೇ ಪ್ರತಿವಾದಿ ಸೇರಿ ಕಟ್ಟಿರುತ್ತೇವೆ. ಅರ್ಧದಲ್ಲಿ ನಾನು ವಾಸ ಇದ್ದು, ಉಳಿಕೆ ಅರ್ಧದಲ್ಲಿ 2 ನೇ ಪ್ರತಿವಾದಿ ವಾಸ ಇದ್ದಾರೆ. ಮನೆಯು ಸ.ನಂ. ನಲ್ಲಿ ಇರುವ ಕಾರಣ ಭಾಗ ಬರಬೇಕೆಂದು ಕೇಳಿರುವುದಿಲ್ಲ. ಮನೆಯಲ್ಲಿ ಈಗಾಗಲೇ ನಾನು ವಾಸ ಇರುವ ಕಾರಣ ಭಾಗ

ಬರಬೇಕೆಂದು ಕೇಳಿರುವುದಿಲ್ಲ. ಮನೆಯು ತಿಮ್ಮಪ್ಪಯ್ಯ ಬಿನ್ ಬೋರಪ್ಪನ ಹೆಸರಿನಲ್ಲಿ ಇರುತ್ತದೆ. ಮನೆಯ ವಿಸ್ತೀರ್ಣ ನನಗೆ ಗೊತ್ತಿಲ್ಲ. ಪ್ರತಿವಾದಿಗಳೊಟ್ಟಿಗೆ ನಾನು ವಾಸ ಇರಲಿಲ್ಲ ಎಂದರೆ ಸರಿಯಲ್ಲ. ವಾದ ಪತ್ರದಲ್ಲಿ ಹೇಳಿರುವ ಜಮೀನುಗಳು ಯಾರಿಗೆ ಯಾವ ರೀತಿ ಬಂದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ.

ನಮ್ಮ ಕುಟುಂಬದ ಮೂಲ ಪುರುಷ ತಿಮ್ಮಪ್ಪಯ್ಯ. ನನ್ನ ತಂದೆಯವರಿಗೆ ಇದ್ದಂತಹ ಪಿತ್ರಾರ್ಜಿತ ಸ್ವತ್ತುಗಳ ಬಗ್ಗೆ ಹೇಳಬಲ್ಲೆ ಅವುಗಳೆಂದರೆ ಸ.ನಂ. 15/2, 17/1, 21/1 ಎ ಈ ಮೂರು ಸ್ವತ್ತುಗಳು ನನ್ನ ತಂದೆಯ ಪಿತ್ರಾರ್ಜಿತ ಸ್ವತ್ತುಗಳಾಗಿರುತ್ತದೆ. ಇದನ್ನು ಹೊರತುಪಡಿಸಿ ಬೇರೆ ಬೇರೆ ಗ್ರಾಮದಲ್ಲಿ ನನ್ನ ತಂದೆಯ ಹೆಸರಿನಲ್ಲಿ ಜಮೀನು ಇರುವುದಿಲ್ಲ. ಅರಕಲಗೂಡು ತಾಲ್ಲೂಕು ಹಾನಗಲ್ ಗ್ರಾಮದ ಸ.ನಂ. 20/6 ರಲ್ಲಿ 1 ಎಕರೆ 20 ಗುಂಟೆ ಜಮೀನನ್ನು ನಾನು ವ್ಯವಸಾಯ ಮಾಡುತ್ತಿಲ್ಲ. ಅದೇ ರೀತಿಯಾಗಿ ಸ.ನಂ. 20/1 ರಲ್ಲಿ 29 ಗುಂಟೆ ಜಮೀನನ್ನು ನಾನೇ ಅನುಭವಿಸುತ್ತಿದ್ದೇನೆ ಎಂದರೆ ಸರಿಯಲ್ಲ. ಮೇಲೆ ಹೇಳಿದಂತಹ ಸ್ವತ್ತುಗಳಲ್ಲಿ ನಿಮಗೆ ಹಿಸ್ಸೆ ಬರಬೇಕ ಎಂದು ಕೇಳಲಾಗಿ ಸಾಕ್ಷಿಯು ನನ್ನ ತಾತ ಹಾಗೂ ತಂದೆಯ ಹೆಸರಿನಲ್ಲಿ ಇದ್ದರೆ ನನಗೆ ಹಿಸ್ಸೆ ಬರಬೇಕು ಎಂದು ಉತ್ತರಿಸುತ್ತಾರೆ. ಅರಕಲಗೂಡು ತಾ. ಸೀಬರಹಳ್ಳಿ ಗ್ರಾಮದ ಸ.ನಂ. 28/1 ರಲ್ಲಿ 4 ಎಕರೆ 3 ಗುಂಟೆ ಜಮೀನು ಇದ್ದು ಅದನ್ನು ಯಾರು ಅನುಭವ ಮಾಡುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಸದರಿ ಸ್ವತ್ತು ನನ್ನ ತಂದೆ ಹಾಗೂ ನನ್ನ ತಾತನ ಹೆಸರಿನಲ್ಲಿ ಇರುವುದಿಲ್ಲ. ಸದರಿ ಸ್ವತ್ತು ನನ್ನ ತಂದೆ ಹಾಗೂ ನನ್ನ ತಾತನಿಗೆ ಸೇರಿದ್ದರೆ ನನಗೆ ಹಿಸ್ಸೆ ಬರಬೇಕು. ನನ್ನ ತಂದೆಗೆ ಸೇರಿದಂತಹ ಜಮೀನು ಅರಕಲಗುಡು ತಾಲ್ಲೂಕಿನಲ್ಲಿ ಇರುತ್ತದೆ. ಸದರಿ ಸ್ವತ್ತುಗಳನ್ನು ಈ ಪ್ರಕರಣದಲ್ಲಿ ಸೇರಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ಪಹಣಿ ಇಲ್ಲದ ಕಾರಣ

ಸೇರಿಸಿರುವುದಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ಜಮೀನುಗಳನ್ನು ಯಾರು ಅನುಭವ ಮಾಡುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ.

ದಾವಾ ಅನುಸೂಚಿ 4 ರಿಂದ 9 ರ ಸ್ವತ್ತುಗಳನ್ನು ನಾನು, ಹಾಗೂ ನನ್ನ ಅಣ್ಣ ಖರೀದಿ ಮಾಡಿರುತ್ತೇವೆ. ನನ್ನ ಅಣ್ಣ ಎಂದರೆ ತಿಮ್ಮಪ್ಪಗೌಡ. ನನ್ನ ಅಣ್ಣ 1990,1991,1996 , ಖರೀದಿ ಮಾಡಿರುತ್ತಾರೆ. ಸಾಕ್ಷಿ ಮುಂದುವರೆದು ಸೈಟ್ ಅನ್ನು 2006 ರಲ್ಲಿ ಖರೀದಿ ಮಾಡಿರುತ್ತಾರೆಂದು ಉತ್ತರಿಸುತ್ತಾರೆ. ನನ್ನ ಅಣ್ಣ ಶಿಕ್ಷಕರಾಗಿದ್ದರು. ನನ್ನ ಅಣ್ಣನ ಜೀವಿತ ಕಾಲದಲ್ಲಿ 2 ನೇ ಪ್ರತಿವಾದಿ ಶಿಕ್ಷಕರಾಗಿದ್ದರು ಎಂದರೆ ಸರಿಯಲ್ಲ. ಆ ಸಂಧರ್ಭದಲ್ಲಿ ನಾನು ಕುಟುಂಬದಿಂದ ಹೊರಗಡೆ ವಾಸ ಇದ್ದೆ ಎಂದರೆ ಸಾಕ್ಷಿಯು ನಾನು ಹೊರಗಡೆ ವಾಸ ಇದ್ದೆ, ಆದರೆ ರಜೆ ದಿನಗಳಲ್ಲಿ ನಾನು, ಹೆಂಡತಿ ಹಾಗೂ ನನ್ನ ಮಕ್ಕಳು ಕುಟುಂಬದ ಪರವಾಗಿ ದುಡಿದಿರುತ್ತೇವೆ. ಹಾಗೂ ನನ್ನ ಸಂಬಳದ ಹಣವನ್ನು ಕುಟುಂಬದ ಯಜಮಾನರಾಗಿದ್ದ ತಿಮ್ಮಪ್ಪಗೌಡರಿಗೆ ನಾನು ನೀಡುತ್ತಿದ್ದೆ. ನನ್ನ ಅಣ್ಣ ತಿಮ್ಮಪ್ಪಗೌಡ ಕುಟುಂಬದ ಯಜಮಾನರಾಗಿದ್ದ ಕಾರಣ ಸ್ವತ್ತುಗಳನ್ನು ಅವರ ಹೆಸರಿಗೆ ಖರೀದಿ ಮಾಡಿರುತ್ತಾರೆ. ನಾನು ಸಹಾ ಅವರಿಗೆ ಹಣ ನೀಡಿರುತ್ತೇನೆ. ತಿಮ್ಮಪ್ಪಗೌಡರು ಶಿಕ್ಷಕರಾಗಿದ್ದು ಅವರ ಸಂಬಳದಿಂದ ದಾವಾ ಅನುಸೂಚಿ 4 ರಿಂದ 9 ರ ಸ್ವತ್ತುಗಳನ್ನು ಖರೀದಿ ಮಾಡಿದ್ದು, ನಾನು ಯಾವುದೇ ಹಣವನ್ನು ನೀಡದೆ ಇದ್ದರೂ ಸಹಾ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಅಣ್ಣನಿಗೆ ಯಾವುದೇ ಹಣವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿಯಾಗಿ ಅವರೊಟ್ಟಿಗೆ ವಾಸ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಅನುಸೂಚಿ 4 ರಿಂದ 10 ನೇ ಸ್ವತ್ತುಗಳು ತಿಮ್ಮಪ್ಪಗೌಡರ ಸ್ವಯಾರ್ಜಿತ ಸ್ವತ್ತುಗಳು ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಅನುಸೂಚಿ 1

ರಿಂದ 3 ರ ಸ್ವತ್ತುಗಳಲ್ಲಿ ನೀವು ಅನುಭವ ಮಾಡುತ್ತಿದ್ದೀರಿ ಎಂದು ಕೇಳಲಾಗಿ ಸಾಕ್ಷಿಯು ಅರ್ಧ ಸ್ವತ್ತುಗಳನ್ನು ಅನುಭವ ಮಾಡುತ್ತಿರುವುದಾಗಿ ಉತ್ತರಿಸುತ್ತಾರೆ. ದಾವಾ ಅನುಸೂಚಿ 4 ರಿಂದ 10 ರ ಸ್ವತ್ತುಗಳಲ್ಲಿ ಪ್ರತಿವಾದಿಗಳು ಅನುಭವ ಮಾಡುತ್ತಿದ್ದಾರೆ ಎಂದರೆ ಸುಳ್ಳು. ದಾವಾ ಅನುಸೂಚಿ 4 ರಿಂದ 10 ಸ್ವತ್ತುಗಳಲ್ಲಿ ನನಗೆ ಯಾವುದೇ ಹಿಸ್ಸೆ ಬರಬೇಕು ಎಂದರೆ ಸರಿಯಲ್ಲ. ದಾವಾ ಅನುಸೂಚಿ 4 ರಿಂದ 10 ರ ಸ್ವತ್ತುಗಳು ಪ್ರತಿವಾದಿಗಳ ಸ್ವಯಾರ್ಜಿತ ಆಸ್ತಿಯಾಗಿದ್ದು ನನಗೆ ಹಿಸ್ಸೆ ಬರಬೇಕು ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಾದ 4 ರಿಂದ 10 ನ್ನು ಲಪಾಟಿಯಿಸಲು ನಾನು ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ.

ತಿಮ್ಮಪ್ಪಗೌಡರಿಗೆ 5 ಜನ ಮಕ್ಕಳು, ಇಬ್ಬರು ಗಂಡು ಮಕ್ಕಳು, ಅವರ ಹೆಸರು ಎಂದರೆ ಆನಂದ ಹಾಗೂ ಅಭಿನಂದನ್. 6 ನೇ ಪ್ರತಿವಾದಿ ಅಭಿನಂದನ್ ಸ್ವಲ್ಪ ಸ್ವಲ್ಪ ಮಾತನಾಡುತ್ತಾನೆ. ಸದರಿ ವ್ಯಕ್ತಿಯು ಅಂಗವಿಕಲನಾಗಿದ್ದು, ಸ್ವಾಸ್ಥ್ಯ ಸರಿಯಿರುವುದಿಲ್ಲ ಎಂದರೆ ಸರಿಯಲ್ಲ. ಸದರಿಯವರನ್ನು ಅವರ ತಾಯಿ ನೋಡಿಕೊಳ್ಳುತ್ತಿದ್ದಾರೆ ಎಂದರೆ ಹೌದು. 6 ನೇ ಪ್ರತಿವಾದಿಗೆ ಬುದ್ದಿಮಾಂಧ್ಯತೆ ಇರುವುದರಿಂದ ಅವರ ತಾಯಿ ಪೋಷಣೆ ಮಾಡುತ್ತಿರುತ್ತಾರೆ ಎಂದರೆ ಹೌದು. ಸಾಕ್ಷಿ ಮುಂದುವರೆದು ಅವರ ಮಗ ಆಗಿರುವ ಕಾರಣ ಅವರೇ ಪೋಷಣೆ ಮಾಡುತ್ತಿರುತ್ತಾರೆ. 6 ನೇ ಪ್ರತಿವಾದಿಗೆ ವ್ಯವಹಾರ ಜ್ಞಾನ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣಾ ಪ್ರಮಾಣ ಪತ್ರ ವನ್ನು ವಕೀಲರಿಗೆ ನಾನೇ ಹೇಳಿ ಬರೆಸಿರುತ್ತೇನೆ.

ಶ್ರೀ. ಡಿ.ಬಿ.ಡಿ. ವಕೀಲರು ಮುಂದುವರೆದು ಪಾಟೀಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ

(ಅಮರ್ ವಿ.ಎಲ್.)

ಸೀನಿಯರ್ ಸಿವಿಲ್ ಜಡ್ಜ್ ಮತ್ತು
ಜೆಎಂಎಫ್‌ಸಿ ಹೊಳೆನರಸೀಪುರ